ಲಕ್ಷ ಎಸ್ಟಿಮೇಟ್ ಹಣವನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂದು ನಿರ್ದಿಷ್ಟವಾಗಿ ಹೇಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಸನ್ಮಾನ್ಯ ಅಧ್ಯಕ್ಷರೆ, 1996-97ನೇ ಸಾಲಿನಲ್ಲಿ ಪ್ರಾರಂಭವಾಗಿರುವಂತಹ ಶಾಲೆ ರನ್ನ ಸ್ಮಾರಕ ಶಾಲೆ. ಈ ಶಾಲೆಗೆ 1996-97ನೇ ಸಾಲಿನಲ್ಲಿ ನಾವು 10 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಆ ಶಾಲೆಗೆ ಬಂದಿಲ್ಲ. ಆದರೆ ನಾವು ಬರದೇ ಇದ್ದರೂ ಕಟ್ಟಡಕ್ಕೋಸ್ಕರ ನಾವು ಉಳಿದಿರುವಂತಹ ಹಣವನ್ನು ಶೇಖರಣೆ ಮಾಡಿ ಇಟ್ಟಿದ್ದೇವೆ. ಈ ವರ್ಷ ಸಹ ಅದಕ್ಕೆ ಇಪ್ಪತ್ತು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಅದು ಅಷ್ಟು ಅವಶ್ಯಕತೆ ಇದೆ ಎಂದು ನಮ್ಮ ಸ್ನೇಹಿತರು ಏನು ಹೇಳುತ್ತಿದ್ದಾರೆ, ಅದಕ್ಕೆ ಎಷ್ಟು ಖರ್ಚಾಗಬೇಕೋ ಅಷ್ಟು ಖರ್ಚಾಗುತ್ತದೆ. ಅಲ್ಲದೆ 1998-99ನೇ ಸಾಲಿನಲ್ಲಿ ಈ ಕಟ್ಟಡವನ್ನು ಕಟ್ಟಿಸಲೇ ಬೇಕಾಗುತ್ತದೆ. ಏಕೆಂದರೆ ಅದರ ಅವಶ್ಯಕತೆ ಇದೆ. ಈಗ ಇರತಕ್ಕಂತಹ ಮಾದರಿ ಪ್ರಾಥಮಿಕ ಪಾಠಶಾಲೆ ಏನಿದೆ, ಅಲ್ಲಿ ಇರುವಂತಹ ಮಕ್ಕಳಿಗೆ ಅನಾನುಕೂಲ ಆಗುತ್ತದೆ ಎಂಬ ಭಾವನೆಯನ್ನು ಇಟ್ಟುಕೊಂಡು ಇದನ್ನು ಕಟ್ಟಿಸಬೇಕಾಗುತ್ತದೆ. ಈಗ ಒಟ್ಟು 8 ರೂಂಗಳು ಇದೆ, 3 ರೂಂ ಅವರಿಗೆ ಬಿಟ್ಟುಕೊಟ್ಟು, ಇನ್ನುಳಿದ ರೂಂಗಳನ್ನು ನಮಗೆ ಒದಗಿಸುವಂತಹ ವ್ಯವಸ್ಥೆ ಮಾಡಿಕೊಟ್ಟಿದ್ದೇವೆ. ಮತ್ತು ಈಗ ಕಟ್ಟಡದ ಅವಶ್ಯಕತೆ ಇದೆ. ಮಾನ್ಯ ಸ್ನೇಹಿತರು ಈ ಪ್ರಶ್ನೆಯನ್ನು ಕೇಳಿದ ಉದ್ದೇಶ ನನಗೂ ಅರ್ಥವಾಗಿದೆ. ಆದುದರಿಂದ ಆ ಉದ್ದೇಶವನ್ನು ತಿಳಿದುಕೊಂಡು ಬರುವ ವರ್ಷದಲ್ಲಿ ಖಂಡಿತ ಈ ಕಟ್ಟಡವನ್ನು ಕಟ್ಟಿಸಿಕೊಡುವುದಕ್ಕೆ ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದು ಮಾದರಿ ಶಾಲೆ ಆಗಿರುವುದರಿಂದ ಎಲ್ಲಾ ರೀತಿಯ ಸವಲತ್ತುಗಳನ್ನು ಒಳಗೊಂಡಿರಬೇಕು. ಎಂಟು ಕೊಠಡಿಗಳು ಇತ್ತು. ಮೂರು ಕೊಠಡಿಗಳನ್ನು ಅವರು ನಡೆಸುತ್ತಿದ್ದಾರೆ, ಇನ್ನು ಐದು ರೂಂಗಳನ್ನು ನಮ್ಮ ರನ್ನ ಶಾಲೆಯನ್ನು ನಡೆಸುವುದಕ್ಕೆ ಕೊಟ್ಟಿದ್ದೇವೆ. ಏಕೆಂದರೆ ನಾವು ಮಂಜೂರು ಮಾಡಿದ ತಕ್ಷಣ ಹಣ ಒದಗಿಸುವುದಿಲ್ಲ, ಒದಗಿಸುವುದಕ್ಕೆ ಸಾಧ್ಯ ಆಗುವುದಿಲ್ಲ. ಏಕೆಂದರೆ ಬಜೆಟ್‌ನಲ್ಲಿ ಹಣ ಇಲ್ಲದೇ ಇರುವುದರಿಂದ ತಾತ್ಕಾಲಿಕವಾಗಿ ಈ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿರುವುದು. ಮುಂದೆ ಇದಕ್ಕೆ ವ್ಯವಸ್ಥಿತವಾದ ಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಹೇಳುತ್ತೇನೆ.

ವಿಷಯ: ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ರಕ್ತನಿಧಿ ಬ್ಯಾಂಕ್‌ಗಳು

472 (3877)

ಶ್ರೀ ಜಗದೀಶ್‌ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಮಾನ್ಯತೆ ಪಡೆದ, ಮತ್ತು ಮಾನ್ಯತೆ ಇಲ್ಲದ ಒಟ್ಟು ರಕ್ತನಿಧಿಬ್ಯಾಂಕುಗಳು ಎಷ್ಟು? ಅವುಗಳು ಯಾವುವು? (ವಿವರಗಳನ್ನು ಒದಗಿಸುವುದು).

(ಆ) ಈಗಿನ ರಕ್ತನಿಧಿ ಬ್ಯಾಂಕ್‌ಗಳಿಂದ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ತುರ್ತು ಸಂದರ್ಭದಲ್ಲಿ ತುರ್ತು ರೋಗಿಗಳಿಗೆ ರಕ್ತವನ್ನು ಪೂರೈಸಲು ಸಾಧ್ಯವಿದೆಯೇ?

(ಇ) ಕೆಲವೊಂದು ತುರ್ತು ಸಂದರ್ಭದಲ್ಲಿ ರೋಗಿಗಳಿಗೆ ರಕ್ತ ಪೂರೈಕೆ ಇಲ್ಲದೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ: ಹೆಚ್.ಸಿ.ಮಹದೇವಪ್ಪ, (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಮಾನ್ಯತೆ ಪಡೆದ ಒಟ್ಟು ರಕ್ತನಿಧಿಗಳ ಸಂಖ್ಯೆ: ಎರಡು.

1) ಕರ್ನಾಟಕ ಮೆಡಿಕಲ್ ಕಾಲೇಜ್ ಆಸ್ಪತ್ರೆ, ಹುಬ್ಬಳ್ಳಿ (ಸರ್ಕಾರಿ),

2) ಸೌತ್ ಸೆಂಟ್ರಲ್ ರೈಲ್ವೆ ಆಸ್ಪತ್ರೆ, ಹುಬ್ಬಳ್ಳಿ (ಸರ್ಕಾರಿ).

ಮಾನ್ಯತೆ ಪಡೆಯದ ರಕ್ತನಿಧಿಗಳು ಇಲ್ಲ.

ಆ) ಸಾಧ್ಯವಿದೆ. ಅಲ್ಲದೆ ರೋಗಿಗಳನ್ನೂ ಸಹ ರಕ್ತನಿಧಿ ಇರುವ ಆಸ್ಪತ್ರೆಗೆ ವರ್ಗಾಯಿಸಬಹುದಾಗಿದೆ.

ಇ) ಬಂದಿರುವುದಿಲ್ಲ. ಆದರೂ, ಇಂತಹ ಕಷ್ಟಗಳನ್ನು ನಿವಾರಿಸಲು ಹುಬ್ಬಳ್ಳಿಯ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ರಕ್ತನಿಧಿಯನ್ನು ಕಾರ್ಯಗತಗೊಳಿಸಲಾಗಿದೆ. ಧಾರವಾಡ ಜಿಲ್ಲಾ ಆಸ್ಪತ್ರೆಯಲ್ಲೂ ರಕ್ತ ನಿಧಿ ತೆರೆಯಲು ಕ್ರಮ ಕೈಗೊಳ್ಳಲಾಗಿದೆ.

ಇದಲ್ಲದೆ ಗದಗ ಮತ್ತು ಹಾವೇರಿ ಉಪ-ವಿಭಾಗೀಯ ಆಸ್ಪತ್ರೆಗಳಲ್ಲಿ ರಕ್ತನಿಧಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹುಬ್ಬಳ್ಳಿ-ಧಾರವಾಡದಲ್ಲಿ ರಕ್ತ ನಿಧಿ ಆಸ್ಪತ್ರೆ ಎರಡು ಇದೆ ಎಂದು ಹೇಳಿದ್ದಾರೆ. ಅವು ಯಾವುವೆಂದರೆ, ಕರ್ನಾಟಕ ಮೆಡಿಕಲ್ ಆಸ್ಪತ್ರೆ ಮತ್ತು ಸೌತ್ ಸೆಂಟ್ರಲ್ ರೈಲ್ವೆ ಆಸ್ಪತ್ರೆ ಎಂದು ಹೇಳಿದ್ದಾರೆ. ಆದರೆ ಮಾನ್ಯತೆ ಇಲ್ಲದಂತಹ ಎಷ್ಟು ರಕ್ತನಿಧಿ ಆಸ್ಪತ್ರೆ ಇದೆ ಎಂದು ಕೇಳಿದಾಗ, ಯಾವುದೇ ಮಾನ್ಯತೆ ಇಲ್ಲದ ಆಸ್ಪತ್ರೆ ಇಲ್ಲ ಎಂದು ಹೇಳಿದ್ದಾರೆ. ಆದರೆ ಮಾನ್ಯತೆ ಪಡೆಯದೆ ಇರುವಂತಹ ಎರಡು ಮೂರು ರಕ್ತನಿಧಿ ಆಸ್ಪತ್ರೆಗಳು ನಡೆಯುತ್ತಾ

ಇವೆ. ಇದು ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂಬುದನ್ನು ನಾನು ಸಚಿವರನ್ನು ಕೇಳಬಯಸುತ್ತೇನೆ.

ಡಾ: ಹೆಚ್.ಸಿ.ಮಹದೇವಪ್ಪ: ಸನ್ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ ಮಾನ್ಯತೆ ಪಡೆಯದೆ ಇರುವಂತಹ ರಕ್ತ ನಿಧಿಗಳು ಯಾವುದೂ ಇಲ್ಲ. ಸುಮಾರು 58 ಲೈಸೆನ್ಸ್ ಇಲ್ಲದೆ ಇರುವಂತಹ ill-equipped blood banks ರಾಜ್ಯದಲ್ಲಿ ಇವೆ. ಹುಬ್ಬಳ್ಳಿ-ಧಾರವಾಡದಲ್ಲಿ ಮೂರು ರಕ್ತನಿಧಿ ಆಸ್ಪತ್ರೆಗಳು ಈ ರೀತಿ ನಡೆಯುತ್ತಾ ಇವೆ ಎಂದು ಹೇಳುತ್ತಿದ್ದಾರೆ. ಆದರೆ ನಾವು ಈಗಾಗಲೇ ಅದು ನಡೆಯದೆ ಇರುವ ರೀತಿಯಲ್ಲಿ ಕ್ರಮ ಕೈಗೊಂಡಿದ್ದೇವೆ. ಮತ್ತೊಂದು ಈಗ ನವೀಕರಣಗೊಳಿಸಿ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ನಮಗೆ ಪರವಾನಿಗೆ ಕೊಡಬೇಕು ಎಂದು ಹೇಳುತ್ತಾ ಇದ್ದಾರೆ. ಸುಪ್ರೀಂ ಕೋರ್ಟ್‌ನ ಗೈಡ್‌ಲೈನ್ಸ್‌ನ್ನು ಫುಲ್‌ಫಿಲ್ ಮಾಡಿದರೆ ಅವರಿಗೆ ಕೊಡುವುದಕ್ಕೆ ಸಾಧ್ಯ ಇದೆ. ಮತ್ತು ಸರ್ಕಾರದ ವತಿಯಿಂದ ಈಗಾಗಲೇ ಧಾರವಾಡ, ಗದಗ್, ಮತ್ತು ಹಾವೇರಿಯಲ್ಲಿ ಸರ್ಕಾರಿ ರಕ್ತ ನಿಧಿ ಆಸ್ಪತ್ರೆಯನ್ನು ಸ್ಥಾಪನೆ ಮಾಡಿದ್ದೇವೆ. ನಿನ್ನೆ ದಿವಸ ಅಂದರೆ 17ನೇ ಭಾನುವಾರ ನಾನೇ ಖುದ್ದಾಗಿ ಧಾರವಾಡ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದೇನೆ. ಅದು ಅಂತಿಮ ಹಂತದಲ್ಲಿ ಇದೆ. ಅಲ್ಲಿ ಇರುವಂತಹ ರೋಗಿಗಳಿಗೆ ಅನಾನುಕೂಲ ಆಗದೆ ಇರುವ ರೀತಿಯಲ್ಲಿ ಅವರಿಗೆ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ-ಧಾರವಾಡದಲ್ಲಿ ಇರುವುದು ಕೇವಲ ಎರಡು ಬ್ಲಡ್ ಬ್ಯಾಂಕ್. ಆದರೆ ತುರ್ತು ಸಂದರ್ಭದಲ್ಲಿ ಈ ಎರಡು ಬ್ಲಡ್‌ಬ್ಯಾಂಕಿನಿಂದ ತೆಗೆದುಕೊಳ್ಳುವ ರಕ್ತ ಸಾಕಾಗುವುದಿಲ್ಲ. ಏಕೆಂದರೆ ಮೊನ್ನೆ ತಾನೇ ಮೋಟೇಬೆನ್ನೂರ್ ಬಳಿ ಅಪಘಾತ ಆದಾಗ ಅಲ್ಲಿ ಕಿಮ್ಸ್ ಆಸ್ಪತ್ರೆಯಲ್ಲಿ ಕೆಲವೊಂದು ರೋಗಿಗಳು, ಗಾಯಾಳುಗಳು ರಕ್ತ ಇಲ್ಲದಂತಹ ಸಂದರ್ಭದಲ್ಲಿ ಅವರು ತೊಂದರೆಗೊಳಗಾಗಿದ್ದು ಸರ್ಕಾರದ ಗಮನಕ್ಕೆ ಬಂದಿರಬಹುದು. ಆ ದಿವಸ ಮಾನ್ಯ ಜಿಲ್ಲಾ ಸಚಿವರಾದಂತಹ ಮಾನ್ಯ ಎಸ್.ಎಸ್.ಪಾಟೀಲ್ ಅವರು, ಅವರ ಕಣ್ಣ ಮುಂದೆ ಕೀಮ್ಸ್ ಆಸ್ಪತ್ರೆಯಲ್ಲಿ ಆದಂತಹ ತೊಂದರೆಯನ್ನು ನೋಡಿದ್ದಾರೆ. ಆದಕಾರಣ ಹುಬ್ಬಳ್ಳಿ ಧಾರವಾಡದಲ್ಲಿ ಇನ್ನು ಹೆಚ್ಚಿನ ಬ್ಲಡ್ ಬ್ಯಾಂಕ್‌ಗಳ ಅವಶ್ಯಕತೆ ಇದೆ. ಮತ್ತು ಕೆಲವು ಪ್ರೊಫೆಷನಲ್ ಬ್ಲಡ್ ಕೊಡುವವರನ್ನು ಅವಾಯ್ಡ್ ಮಾಡಿ, ಸಾರ್ವಜನಿಕರಿಗೆ ಇದರ ಬಗ್ಗೆ ಹೆಚ್ಚಿನ ಪ್ರಚಾರ ಮಾಡಿ, ಸಾರ್ವಜನಿಕರಿಂದ ರಕ್ತವನ್ನು ತೆಗೆದುಕೊಳ್ಳುವ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕಾಗಿದೆ. ಮತ್ತು ಹುಬ್ಬಳ್ಳಿ, ಧಾರವಾಡದಲ್ಲಿ ಅದರ ಬಗ್ಗೆ ಇನ್ನೂ ಹೆಚ್ಚಿನ ಕ್ರಮವನ್ನು ತೆಗೆದುಕೊಳ್ಳಬೇಕು. ಏಕೆಂದರೆ ಹುಬ್ಬಳ್ಳಿ-ಧಾರವಾಡದ ಸುತ್ತ-ಮುತ್ತ ಹೆಚ್ಚಿನ ರೀತಿಯಲ್ಲಿ ಅಪಘಾತಗಳು ಸಂಭವಿಸುತ್ತಾ ಇದೆ. ಗಾಯಾಳುಗಳು ಹೆಚ್ಚಿನ ತೊಂದರೆಯನ್ನು ಅನುಭವಿಸುತ್ತಾ ಇದ್ದಾರೆ. ಆದಕಾರಣ ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ.

ಡಾ. ಹೆಚ್. ಸಿ. ಮಹದೇವಪ್ಪ: ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿಶ್ವಬ್ಯಾಂಕಿನ ನೆರವಿನ ಅಡಿಯಲ್ಲಿ ರಾಜ್ಯದಲ್ಲಿ ಸುಮಾರು 30ಕ್ಕೂ ಹೆಚ್ಚು ರಕ್ತ ನಿಧಿಗಳನ್ನು ಸ್ಥಾಪನೆ ಮಾಡುವುದಕ್ಕೆ ಕ್ರಮಕೈಗೊಂಡಿದ್ದೇವೆ. ಈ ಅಪಘಾತಗಳು ಆದಾಗಲೇ ರಕ್ತ ಬೇಕಾಗುವುದು. ಮತ್ತು ಈ ಆ್ಯಕ್ಸಿಡೆಂಟ್, ಸರ್ಜರಿ, ಈ ರೀತಿಯ ಸಂದರ್ಭಗಳಲ್ಲಿ ರಕ್ತದ ಅವಶ್ಯಕತೆ ಇರುತ್ತದೆ. 21ನೇ ತಾರೀಖು, ಅಂದರೆ ನಾಳೆ, ಎಲ್ಲಾ ಮಾನ್ಯ ಶಾಸಕರು, ಸೆಕ್ರೆಟರಿ ಇವರೆಲ್ಲಾ voluntary donation of blood ಕೊಡಬೇಕೆಂದು ತಾವೇ ನಿನ್ನೆ ಬೆಳಿಗ್ಗೆ ಹೇಳಿದಿರಿ. ಆದ್ದರಿಂದ ವಾಲೆಂಟರಿಯಾಗಿ ಎಲ್ಲರೂ ರಕ್ತವನ್ನು ದಾನ ಮಾಡಿದರೆ, ರಕ್ತ ಇಲ್ಲ ಎಂದು ಹುಡುಕಾಡಬೇಕಾದ ಅವಶ್ಯಕತೆಯೇ ಇರುವುದಿಲ್ಲ. ಇಲ್ಲಿ ಅನೇಕ ಜನ ಶಾಸಕರು ಯುವಕರಿದ್ದೀರಿ ಹಿರಿಯ ಸಚಿವರು ಇದ್ದೀರಿ ಕೊಡತಕ್ಕಂತವರನ್ನು ಮೋಟಿವೇಷನ್ ಮಾಡಿ ಅಲ್ಲೇ ರಕ್ತವನ್ನು ಕೊಟ್ಟು ಪ್ರಾಣವನ್ನು ಉಳಿಸುವಂತಹ ಕೆಲಸ ಮಾಡಬೇಕು.... ರಕ್ತಕ್ಕೆ ಪರ್ಯಾಯವಾದಂತಹ ವಸ್ತುವನ್ನು ತಯಾರು ಮಾಡುವುದಕ್ಕೆ ಸಾಧ್ಯ ಇಲ್ಲದೇ ಇರುವುದರಿಂದ....

ಅಧ್ಯಕ್ಷರು: ನಮ್ಮ ರಕ್ತವನ್ನು ಕೊಡಬಹುದು ತಾನೇ?

ಡಾ: ಹೆಚ್. ಸಿ. ಮಹದೇವಪ್ಪ: ಕೊಡಬಹುದು, ಆದರೆ ಎಚ್. ಐ. ವಿ. ಯಿಂದ ಸೇಫ್ ಆಗಿ ಇದೆಯಾ ಎಂದು ನೋಡಿಕೊಂಡು ಇನ್‌ಫೆಕ್ಷನ್ ಫ್ರೀ ಇದೆಯೇ ಎಂಬುದನ್ನು ನೋಡಿ ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್ ತೀರ್ಮಾನದ ಪ್ರಕಾರ ಡಿಸೆಂಬರ್ 1996ರೊಳಗೆ ರಕ್ತ ನಿಧಿ ಬ್ಯಾಂಕ್ ಯಾವುದು ಇವೆ, ಅದನ್ನು ಮಾಡಬೇಕಾಗಿತ್ತು. ಆದರೆ ಅನೇಕ ಸರ್ಕಾರಿ ಆಸ್ಪತ್ರೆಯಲ್ಲಿ ಇವತ್ತಿನವರೆವಿಗೂ ಅದು ನಿಯಮಾವಳಿ ಪ್ರಕಾರ ಆಗಿಲ್ಲ. ಇದಕ್ಕೆ ಮಾನ್ಯ ಸಚಿವರು ಉತ್ತರಿಸುತ್ತೀರೋ?

ಡಾ. ಹೆಚ್. ಸಿ. ಮಹದೇವಪ್ಪ: ಸನ್ಮಾನ್ಯ ಅಧ್ಯಕ್ಷರೆ, ನಿಯಮಾವಳಿಗಳ ಪ್ರಕಾರ ಸರಿಯಾಗಿ ಇಲ್ಲ ಎಂದು ಹೇಳುವುದು ಸರಿ ಅಲ್ಲ. ಏಕೆಂದರೆ ನಾವು ಖುದ್ದಾಗಿ ನಾವು ಅನೇಕ ರಕ್ತ ನಿಧಿ ಆಸ್ಪತ್ರೆಗೆ ಭೇಟಿ ಮಾಡಿದ್ದೇನೆ, ಮತ್ತು ಸಭೆಗಳನ್ನು ನಡೆಸಿದ್ದೇನೆ, ಮತ್ತು ನಿರ್ಧಿಷ್ಟವಾದ ಸೂಚನೆಗಳನ್ನು ಕೊಟ್ಟಿದ್ದೇನೆ. ಈಗಾಗಲೇ ವಿಶ್ವ ರಕ್ತಬ್ಯಾಂಕ್ ನಿಧಿಗಳ ಆಧುನೀಕರಣಕ್ಕೆ ಹಣವನ್ನು ಸಹ ಕೊಟ್ಟಿದೆ. ಆದಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಈಗಾಗಲೇ ಸುಮಾರು 24 ಸರ್ಕಾರಿ ಆಸ್ಪತ್ರೆಗಳಲ್ಲಿ ಲೈಸೆನ್ಸ್ ಪಡೆದಿರುವಂತಹ ರಕ್ತ ನಿಧಿಗಳು ಕೆಲಸವನ್ನು ಮಾಡುತ್ತಾ ಇವೆ.

ವಿಷಯ: ಮೊರಾರ್ಜಿದೇಸಾಯಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಖಾದಿ ಸಮವಸ್ತ್ರಗಳ ವಿತರಣೆ.